ದಿನಾಂಕ 25.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಎಸ್.ಆರ್.ಜೆ. ವಕೀಲರಿಂದಃ-**

ಅಸಲು ದಾವಾ ಸಂಖ್ಯೆ 45/2009 ನ್ನು ನನ್ನ ಚಿಕ್ಕಪ್ಪ ಚಾಂಡಿ ಮತ್ತು ಇತರರ ವಿರುದ್ಧ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಈ ಪ್ರಕರಣದ ಪ್ರತಿವಾದಿ 3 ನೇ ಪ್ರತಿವಾದಿಯಾಗಿದ್ದರು ಎಂದರೆ ಸರಿ. ಮಂದಣ್ಣರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸರ್ವೆ ನಂ. 61/1 ರ ಪಹಣಿಯಲ್ಲಿ ಮಂದಣ್ಣರವರ ಹೆಸರು ಇರುವುದಿಲ್ಲ. ಅಸಲು ದಾವಾ ಸಂಖ್ಯೆ 45/2009 ವಜಾ ಆಗಿರುತ್ತದೆ. ಸದರಿ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ. ನಿಶಾನೆ ಪಿ. 5 ಮತ್ತು 7 ರಲ್ಲಿ ಒತ್ತುವರಿಯ ಬಗ್ಗೆ ನಮೂದಿಸಲಾಗಿದೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.